## ಐಶ್ವರ್ಯ ಎಲ್ಲಿ?

ಐಶ್ವರ್ಯ ರೈ ಚಿತ್ರರಂಗದಿಂದ ದೂರವಾಗುತ್ತಿದ್ದಾರೆಯೆ? ಅಥವಾ ಚಿತ್ರರಂಗವೇ ಅವರನ್ನು ದೂರ ಇಟ್ಟಿದೆಯೆ? ‘ಜಾಸ್ಮಿನ್: ಸ್ಟೋರಿ ಆಫ್ ಎ ಲೀಸ್ಡ್ ವೂಂಬ್’ ಎನ್ನುವ ಹಿಂದಿ ಚಿತ್ರದಲ್ಲಿ ಅವರು ನಟಿಸುತ್ತಾರೆ ಎಂದು ಬಹಳ ಹಿಂದೆಯೇ ಸುದ್ದಿ ಹಬ್ಬಿತ್ತು. ಆದರೆ ಆ ಚಿತ್ರ ಆರಂಭವಾಗಲಿಲ್ಲ. ಕಾರಣ ಕೇಳಿದರೆ ಚಿತ್ರದ ನಿರ್ದೇಶಕ ಶ್ರೀನಾರಾಯಣ ಸಿಂಗ್ ಅವರು ‘ಬತ್ತಿ ಗುಲ್ ಮೀಟರ್ ಚಾಲೂ’ ಚಿತ್ರದಲ್ಲಿ ಬ್ಯುಸಿ ಎಂಬ ಸುದ್ದಿ ಬಂತು. ಆ ಚಿತ್ರ ಬಿಡುಗಡೆಯೂ ಆಯಿತು. ಆದರೂ ಜಾಸ್ಮಿನ್ ಶುರುವಾಗಲಿಲ್ಲ. ಈಗ ಕೇಳಿದರೆ, ‘ಚಿತ್ರಕಥೆಯಲ್ಲಿ ಬದಲಾವಣೆ ಆಗಬೇಕೆಂದು ಐಶ್ವರ್ಯ ಅವರೇ ಸೂಚಿಸಿದ್ದಾರೆ ಎನ್ನುತ್ತಿದೆ ಚಿತ್ರತಂಡ.

ಈ ಮಧ್ಯೆ ಹಾಲಿವುಡ್ ನಟ ವಿಲ್ ಸ್ಮಿತ್ ‘ಐಶ್ವರ್ಯ ಜತೆಗೆ ಬಾಲಿವುಡ್‌ನ ಮಸಾಲಾ ಚಿತ್ರವೊಂದರಲ್ಲಿ ನಟಿಸಬೇಕೆಂದು ನನಗೆ ಬಹಳ ಆಸೆಯಿದೆ’ ಎಂದು ಹೇಳಿರುವುದು ದೊಡ್ಡ ಸುದ್ದಿಯಾಗಿದೆ. ಹದಿನೈದು ವರ್ಷಗಳ ಹಿಂದೆ ಸ್ಮಿತ್, ಐಶ್ವರ್ಯಾಳನ್ನು ಭೇಟಿ ಆಗಿದ್ದನಂತೆ. ಇಬ್ಬರೂ ಜತೆಯಾಗಿ ಸಿನಿಮಾವೊಂದರಲ್ಲಿ ನಟಿಸಬೇಕು ಎಂದು ಆಗ ಚರ್ಚೆ ಮಾಡಿದ್ದರಂತೆ. ಫರ್ಹಾನ್ ಅಖ್ತರ್ ಜತೆಗೆ ಸಮಾರಂಭವೊಂದರಲ್ಲಿ ಇತ್ತೀಚೆಗೆ ಸ್ವತಃ ಸ್ಮಿತ್ ಈ ವಿಷಯ ಹಂಚಿಕೊಂಡಿದ್ದಾನೆ. ಕೈಯಲ್ಲಿ ಚಿತ್ರಗಳಿಲ್ಲದಿದ್ದರೂ ಐಶ್ವರ್ಯಾಗೆ ಡಿಮ್ಯಾಂಡ್ ಇದೆ ಎನ್ನುವುದಂತೂ ಸುಳ್ಳಲ್ಲ.



## ಬೋಲ್ಡ್ ಇಮ್ರಾನ್



ಬಾಲಿವುಡ್‌ನಲ್ಲಿ ತನುಶ್ರೀ ದತ್ತಾ ಹಚ್ಚಿದ ಬೆಂಕಿ ಒಂದೇ ಸಮನೆ ಕಾಳ್ಗಿಚ್ಚಿನಂತೆ ಹಬ್ಬುತ್ತಿದೆ. ಹೀರೋಯಿನ್‌ಗಳ ಲೈಂಗಿಕ ಶೋಷಣೆ ಮಾಡುವ ಹೀರೋಗಳ ಕುರಿತು ತನುಶ್ರೀ ದತ್ತಾ ಎತ್ತಿರುವ ಪ್ರಶ್ನೆ ಹಲವು ಆಯಾಮಗಳನ್ನೂ ಪಡೆದುಕೊಳ್ಳುತ್ತಿದೆ. ಸೂಪರ್‌ಸ್ಟಾರ್‌ಗಳೆಲ್ಲ ಬಾಯಿಮುಚ್ಚಿಕೊಂಡು ಕುಳಿತಿದ್ದಾರೆ. ಕೆಲವರು ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಇಮ್ರಾನ್ ಖಾನ್ ಮಾತ್ರ ಈ ಕುರಿತು ನೇರವಾಗಿ ಮಾತನಾಡಿದ್ದಾರೆ.

ಬಾಲಿವುಡ್‌ನ ಹಲವು ಎ ಗ್ರೇಡ್ ನಟರ ಮಟ್ಟಿಗೆ ಇದು ಸಾಮಾನ್ಯ ಸಂಗತಿ. ಅವರು ತಮ್ಮ ಸಿನಿಮಾಗಳಿಗೆ ಹೀರೋಯಿನ್ ಆಗಲು ಬರುವ ನಟಿಯರಿಗೆ ನೇರವಾಗಿ – ನೀನು ನನ್ನ ಜತೆಗೆ ಮಲಗುತ್ತೀಯಾ..– ಎಂದು ಕೇಳುತ್ತಾರೆ. ಮಲಗಲು ಒಪ್ಪಿದರೆ ಸಿನಿಮಾದಲ್ಲಿ ಹೀರೋಯಿನ್ ಪಟ್ಟ ಗ್ಯಾರಂಟಿ. ಇಲ್ಲವಾದಲ್ಲಿ ಅವಕಾಶ ಸಿಗುವುದಿಲ್ಲ’ ಎಂದಿದ್ದಾರೆ ಇಮ್ರಾನ್ ಖಾನ್.

‘ಸದ್ಯಕ್ಕೆ ದೊಡ್ಡ ಹೆಸರೆಂದರೆ ತನ್ಮಯ್ ಭಟ್ ಮತ್ತು ಅಲೋಕ್‌ನಾಥ್ ಅವರದ್ದು. ಆದರೆ ಇನ್ನೂ ದೊಡ್ಡವರ ಮೇಲೆ ಇಂತಹ ಆರೋಪಗಳಿವೆ. ಅವರೆಲ್ಲ ಇಂಡಸ್ಟ್ರಿ ಜತೆಗೇ ಹೆಣೆದುಕೊಂಡವರು. 40 ವರ್ಷಗಳ ಹಿಂದೆ ಹೋಗಿ– ಆ ಕಾಲದಿಂದಲೂ ಬಾಲಿವುಡ್‌ನಲ್ಲಿ ಇಂತಹ ಸಂಗತಿಗಳು ನಡೆದಿವೆ. ದೊಡ್ಡ ದೊಡ್ಡ ನಿರ್ದೇಶಕರು, ನಿರ್ಮಾಪಕರು ಇಂತಹ ಕೆಲಸಗಳನ್ನು ಮಾಡಿದ್ದಾರೆ. ಆದರೆ ಅವರ ಹೆಸರು ಯಾವತ್ತೂ ಹೊರಗೆ ಬಂದಿಲ್ಲ. ನಾನು ಯಾರ ಹೆಸರನ್ನೂ ಹೇಳುವುದಿಲ್ಲ. ಸಂಬಂಧಿಸಿದ ನಟಿಯರೇ ಹೇಳಬೇಕು. ಹಾಗೆ ಯಾರಾದರೂ ದೊಡ್ಡವರ ಹೆಸರು ಹೇಳಿದರೆ, ಆ ನಟಿಯರಿಗೆ ಬೆಂಬಲವಾಗಿ ನಾನು ನಿಲ್ಲುತ್ತೇನೆ’ ಎಂದಿದ್ದಾರೆ ಇಮ್ರಾನ್. ಈತನ ಈ ಬೋಲ್ಡ್ ಹೇಳಿಕೆಯನ್ನು ನೋಡಿ ಚಿತ್ರರಂಗದ ಹಲವರು ಬೆವರತೊಡಗಿದ್ದಾರಂತೆ.

‘ಕ್ವೀನ್’ ಚಿತ್ರದ ನಿರ್ದೇಶಕ ವಿಕಾಸ್ ಬೆಹ್ಲ್ ಕುರಿತೂ ಇಮ್ರಾನ್ ಸ್ಪಷ್ಟವಾಗಿ ಮಾತನಾಡಿದ್ದಾರೆ. ‘ವಿಕಾಸ್ ಬಗ್ಗೆ ಇಂಡಸ್ಟ್ರಿಯಲ್ಲಿ ಎಲ್ಲರಿಗೂ ಗೊತ್ತು. ಯಾರೂ ಮಾತನಾಡುವುದಿಲ್ಲ. ನಾನು ಹಿಂದೆ ಈ ಬಗ್ಗೆ ಮಾತನಾಡಲು ಬಯಸಿದಾಗ ಸುಮ್ಮನಿರಿ ಎಂದು ಹಲವರು ನನಗೆ ಸಲಹೆ ನೀಡಿದ್ದರು. ನಾನು ಮಾತನಾಡಿದರೆ ಸಿನಿಮಾದಲ್ಲಿ ಅವಕಾಶ ಇಲ್ಲದ್ದರಿಂದ ಪ್ರಚಾರಕ್ಕೆ ಮಾತನಾಡುತ್ತಾನೆ ಎನ್ನುತ್ತಾರೆಂದು ಸುಮ್ಮನಿದ್ದೆ’ ಎಂದಿದ್ದಾರೆ ಇಮ್ರಾನ್.

ಹೀಗೆ ಸತ್ಯ ಹೇಳಿದವರ ವಿರುದ್ಧ ಮಾಧ್ಯಮಗಳಲ್ಲಿ ಪ್ರತಿದಾಳಿ ನಡೆಯುತ್ತಿದೆಯಲ್ಲ? ನಿಮ್ಮ ಮೇಲೂ ವಾಗ್ದಾಳಿ ನಡೆಯಲಿಕ್ಕಿಲ್ಲವೆ? ಎಂಬ ಪ್ರಶ್ನೆಗೆ ಇಮ್ರಾನ್, ‘ನಾನು ವಾಟ್ಸಪ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಯಾವುದರಲ್ಲೂ ಇಲ್ಲ. ನನ್ನ ವೆಬ್‌ಸೈಟ್ ಕೂಡಾ. ಪತ್ರಿಕೆಗಳನ್ನೂ ಮನೆಗೆ ತರಿಸುವುದಿಲ್ಲ’ ಎಂದಿದ್ದಾನೆ! ‘ಜಾನೆ ತೂ ಯಾ ಜಾನೆ ನಾ’ ಚಿತ್ರದ ಮೂಲಕ ಸುದ್ದಿ ಮಾಡಿದ್ದ ನಟ ಇಮ್ರಾನ್‌ಗೆ ಸದ್ಯಕ್ಕೆ ಬಾಲಿವುಡ್‌ನಲ್ಲಿ ಯಾವುದೇ ಅವಕಾಶಗಳಿಲ್ಲ. ಇತ್ತೀಚೆಗೆ ಆತ ‘ಮಿಶನ್ ಮಾರ್ಸ್: ಕೀಪ್ ವಾಕಿಂಗ್ ಇಂಡಿಯಾ’ ಎನ್ನುವ ಕಿರುಚಿತ್ರವನ್ನು ನಿರ್ದೇಶನ ಮಾಡುವುದಾಗಿ ಪ್ರಕಟಿಸಿದ್ದಾನೆ.

■ ಬಿಂದು